MITE

Invent Solutions

# MANGALORE INSTITUTE OF TECHNOLOGY & ENGINEERING

(A Unit of Rajalaxmi Education Trust®, Mangalore)

Autonomous Institute affiliated to VTU, Belagavi, Approved by AICTE, New Delhi

Accredited by NAAC with A+ Grade & ISO 9001:2015 Certified Institution




## Course Name : ಸಾಂಸ್ಕೃತಿಕ ಕನ್ನಡ

**Semester : $1^{st}$ / $2^{nd}$**

**Course Code : 26NMCC109**

# Module 3

| Module 3: ಆಧುನಿಕ ಕಾವ್ಯ ಭಾಗ | No. of Hrs:3 |
|---|---|
| ಡಿ.ವಿ.ಜಿ. ರವರ ಮಂಕುತಿಮ್ಮನ ಕಗ್ಗದಿಂದ ಆಯ್ದ ಕೆಲವು  ಭಾಗಗಳು<br><br>ಅನಿಕೇತನ : ಕುವೆಂಪು | |

# ಮಂಕುತಿಮ್ಮನ ಕಗ್ಗ

- ಡಿ ವಿ ಗುಂಡಪ್ಪ

ಕವಿ – ದೇವನಹಳ್ಳಿ ವೆಂಕಟರಮಣಯ್ಯ ಗುಂಡಪ್ಪ



ಜನನ – 17/03/1887

ಸ್ಥಳ – ದೇವನಹಳ್ಳಿ

ಹೆಂಡತಿ – ಭಾಗೀರತಮ್ಮ

ಸಾಹಿತ್ಯ – ಒಟ್ಟು 66 ಕನ್ನಡ ಕೃತಿಗಳ ರಚನೆ

* ಮಂಕುತಿಮ್ಮನ ಕಗ್ಗವು ಕನ್ನಡದ ಭಗವದ್ಗೀತೆ ಎಂದು ಪ್ರಸಿದ್ಧಿ.

* ಇವರು ಕನ್ನಡದ ಆಧುನಿಕ ಸರ್ವಜ್ಞ ಎಂದೇ ಪ್ರಸಿದ್ಧರು

# ಆತ್ಮೋನ್ನತಿ ದಾರಿ

ಗೌರವಿಸು ಜೀವನವ, ಗೌರವಿಸು ಚೇತನವ ।
ಆರದೋ ಜಗವೆಂದು ಭೇದವೆಣಿಸದಿರು ॥
ಹೋರುವುದೆ ಜೀವ-ನ-ಸಮೃದ್ಧಿಗೋಸುಗ ನಿನಗೆ ।
ದಾರಿಯಾತ್ಮೋನ್ನತಿಗೆ – ಮಂಕುತಿಮ್ಮ

ಜೀವನವನ್ನು ಗೌರವಿಸು, ಚೈತನ್ಯವನ್ನು ಗೌರವಿಸು, ಜಗತ್ತು ಅನ್ಯರದು ಎಂದು ಭೇದ ಮಾಡಬೇಡ. ನಾವು ಹೋರಾಟ ನಡೆಸುವುದೆ ಬದುಕಿನ ಏಳ್ಗೆಗಾಗಿ. ಅದು ನಿನ್ನ ಆತ್ಮೋನ್ನತಿಗೆ ದಾರಿ.

# ನಗುತ ಬಾಳು

ನಗುವು ಸಹಜದ ಧರ್ಮ; ನಗಿಸುವುದು ಪರಧರ್ಮ
ನಗುತ - ಕೇಳುತ ನಗುವುದತಿಶಯದ ಧರ್ಮ ॥
ನಗುವ ನಗಿಸುವ ನಗಿಸಿ ನಗುತ ಬಾಳುವ -ವರವ ।
ಮಿಗೆ ನೀನು ಬೇಡಿಕೊಳೊ – ಮಂಕುತಿಮ್ಮ

ಮಾನವನಿಗೆ ನಗುವು ಸಹಜವಾದ ಧರ್ಮ. ಅನ್ಯರನ್ನು ನಗಿಸುವುದು ಪರಧರ್ಮ. ನಗುವನ್ನು ಕೇಳಿನಗುವುದು ಅತಿಶಯ ಧರ್ಮ. ಆದುದರಿಂದ ದೇವರಲ್ಲಿ ನಗುವ, ನಗಿಸುವ, ನಗಿಸಿ ನಗುತ ಬಾಳುವವರನ್ನು ನೀನು ಬೇಡಿಕೊ.

# ಮಾನವನ ಯತ್ನ

ಹೊತ್ತು ಕಣಕಣದಿ ಮಣ್ಣನು ಗೆದ್ದಲಿರುವೆಗಳು ।
ಮೆತ್ತು ಎಡೆ ಬಿಡದೆ ದುಡಿದಾಗಿಸಿದ ಗೂಡು ॥
ಹುತ್ತವಾಗುವುದು ವಿಷಸರ್ಪಕ್ಕೆ ; ಮಾನವನ ।
ಯತ್ನಗಳ ಕಥೆಯಿಷ್ಟೇ – ಮಂಕುತಿಮ್ಮ

ಗೆದ್ದಲಹುಳುಗಳು ಕಣ ಕಣದಲ್ಲಿ ಮಣ್ಣನ್ನು ಹೊತ್ತು ಶ್ರಮದಿಂದ ಕಟ್ಟಿದ ಗೂಡು, ವಿಷದ ಹಾವಿಗೆ ಹುತ್ತವಾಗುವುದು. ಅಂತೆಯೇ ಮಾನವನ ಪ್ರಯತ್ನಗಳೂ ಆಗುವುವು.

# ಜೀವನ ತತ್ವ

ಹುಲ್ಲಾಗು ಬೆಟ್ಟದಡಿ, ಮನೆಗೆ ಮಲ್ಲಿಗೆಯಾಗು।
ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೆ॥
ಬೆಲ್ಲಸಕ್ಕರೆಯಾಗು ದೀನದುರ್ಬಲರಿಂಗೆ।
ಎಲ್ಲರೊಳಗೊಂದಾಗು – ಮಂಕುತಿಮ್ಮ॥

ಬೆಟ್ಟದಡಿಯಲ್ಲಿ ಹುಲ್ಲಾಗು. ಮನೆಗೆ ಮಲ್ಲಿಗೆಯ ಹೂವಾಗು. ವಿಧಿಯು ಕಷ್ಟಗಳೆಂಬ ಮಳೆ ಸುರಿಸಲು ಕಲ್ಲಾಗು. ದೀನದುರ್ಬಲರ ಪಾಲಿಗೆ ನೀನು ಬೆಲ್ಲ ಸಕ್ಕರೆಯಾಗು. ಎಲ್ಲಾ ಜನರೊಂದಿಗೆ ಸದಾ ಒಂದಾಗಿರು

# ಜ್ಞಾನ ವಿಜ್ಞಾನಗಳ ಸಾಮರಸ್ಯ

ಹೊಸಚಿಗುರು ಹಳೆ ಬೇರು ಕೂಡಿರಲು ಮರಸೊಬಗು।
ಹೊಸಯುಕ್ತಿ ಹಳೆತತ್ತ್ವದೊಡಗೂಡೆ ಧರ್ಮ॥
ಋಷಿವಾಕ್ಯದೊಡನೆ ವಿಜ್ಞಾನ ಕಲೆ ಮೇಳವಿಸೆ।
ಜಸವು ಜನಜೀವನಕೆ – ಮಂಕುತಿಮ್ಮ॥

ಹಳೆಯ ಬೇರಿನಿಂದ ಕೂಡಿದ ಮರ, ಹೊಸ ಚಿಗುರಿನಿಂದ ಕೂಡಿದಾಗ ನೋಡಲು ಸುಂದರವಾಗಿರುವ್ರುದು. ಹಳೆಯ ತತ್ವಗಳಿಂದ ಕೂಡಿದ ಧರ್ಮ ಹೊಸ ಯುಕ್ತಿಗಳಿಂದ ಕೂಡಿದರೆ ಚೆನ್ನ. ಪ್ರಾಚೀನ ಋಷಿವಾಣಿಯೊಡನೆ ವಿಜ್ಞಾನ ಕಲೆ ಕೂಡಿದರೆ ಜನಜೀವನ ಹುಲುಸಾಗುತ್ತದೆ.

# ಕುವೆಂಪು

1. ಪೂರ್ಣ ಹೆಸರು: ಕುಪ್ಪಳ್ಳಿ ವೆಂಕಟಪ್ಪ ಪುಟ್ಟಪ್ಪ
2. ಕಾವ್ಯನಾಮ: ಕುವೆಂಪು
3. ಜನನ: 29 ಡಿಸೆಂಬರ್,1904
4. ಕಾಲ: 1904-1994

**5. ಊರು :** ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ಸಮೀಪದ ಕುಪ್ಪಳ್ಳಿಯವರು.

**6. ಪ್ರಮುಖ ಕೃತಿಗಳು :**

ಕವನ ಸಂಕಲನಗಳು – ಕೊಳಲು, ಪಾಂಚಜನ್ಯ, ಪಕ್ಷಿಕಾಶಿ, ಪ್ರೇಮಕಾಶ್ಮೀರ.

ಕಥಾಸಂಕಲನಗಳು - ನನ್ನ ದೇವರು ಮತ್ತು ಇತರ ಕಥೆಗಳು, ಸನ್ಯಾಸಿ ಮತ್ತು ಇತರ ಕಥೆಗಳು.

ಕಾದಂಬರಿಗಳು- ಕಾನೂರು ಹೆಗ್ಗಡತಿ, ಮಲೆಗಳಲ್ಲಿ ಮದುಮಗಳು

ವಿಮರ್ಶಾ ಸಂಕಲನಗಳು  - ತಪೋನಂದನ ,ರಸೋವೈಸಃ

ಮಕ್ಕಳ ಪುಸ್ತಕಗಳು -  ಅಮಲನ ಕತೆ, ಮೋಡಣ್ಣನ ತಮ್ಮ, ಬೊಮ್ಮನಹಳ್ಳಿಯ ಕಿಂದರಜೋಗಿ.

ನಾಟಕಗಳು - ಜಲಗಾರ, ಯಮನ ಸೋಲು, ಬೆರಳ್ಗೆ ಕೊರಳ್

ಆತ್ಮಕಥನ - ನೆನಪಿನ ದೋಣಿಯಲ್ಲಿ

## 7. ಪ್ರಶಸ್ತಿಗಳು:

- ಶ್ರೀರಾಮಾಯಣ ದರ್ಶನಂ ಮಹಾಕಾವ್ಯ- ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಭಾರತೀಯ ಜ್ಞಾನಪೀಠ ಪ್ರಶಸ್ತಿ.
- ರಾಷ್ಟ್ರಕವಿ, ಪಂಪ ಪ್ರಶಸ್ತಿ, ಪದ್ಮವಿಭೂಷಣ ಪ್ರಶಸ್ತಿ.
- ಮೈಸೂರು, ಕರ್ನಾಟಕ, ಗುಲ್ಬರ್ಗ ವಿಶ್ವವಿದ್ಯಾಲಯ-ಗಳಿಂದ ಗೌರವ ಡಾಕ್ಟರೇಟ್.
- ಕರ್ನಾಟಕ ರತ್ನ ಪ್ರಶಸ್ತಿ ಲಭಿಸಿದೆ.

## 8. ಇತರೆ:

- ಆಧುನಿಕ ಕನ್ನಡ ಸಾಹಿತ್ಯ ಕಾವ್ಯಗಳಲ್ಲಿ ಅಗ್ರಗಣ್ಯರು.
- ಧಾರವಾಡದಲ್ಲಿ ನಡೆದ 39ನೆಯ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು.
- ಮಹಾರಾಜ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ, ಪ್ರಿನ್ಸಿಪಾಲರಾಗಿ, ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾಗಿ ನಿವೃತ್ತರಾದರು .

# ಅನಿಕೇತನ

ಕುವೆಂಪು ಅವರ "ಅನಿಕೇತನ" ಕವನವು ಮನುಷ್ಯನು ಯಾವುದೇ ಒಂದು ಜಾತಿ, ಧರ್ಮ, ಭಾಷೆ, ಪ್ರದೇಶ ಅಥವಾ ಗಡಿಗೆ ಸೀಮಿತವಾಗದೆ ವಿಶ್ವಮಾನವನಾಗಿ ಬದುಕಬೇಕು ಎಂಬ ಮಹತ್ವದ ಸಂದೇಶವನ್ನು ನೀಡುತ್ತದೆ. ಮನುಷ್ಯನು ತನ್ನಲ್ಲಿರುವ ಸಂಕುಚಿತ ಮನೋಭಾವ, ಸ್ವಾರ್ಥ, ಅಹಂಕಾರ ಮತ್ತು ಭೇದಭಾವಗಳನ್ನು ತೊರೆದು ವಿಶಾಲವಾದ ಮಾನವೀಯ ದೃಷ್ಟಿಕೋನವನ್ನು ಬೆಳೆಸಿಕೊಳ್ಳಬೇಕು. ಇಡೀ ವಿಶ್ವವನ್ನೇ ತನ್ನ ಮನೆ ಎಂದು ಭಾವಿಸಿ, ಎಲ್ಲರನ್ನೂ ಸಮಾನವಾಗಿ ಕಾಣಬೇಕು. ಜಾತಿ, ಮತ, ಭಾಷೆ, ಪ್ರದೇಶ ಮುಂತಾದ ಭೇದಗಳನ್ನು ಮೀರಿ ಪ್ರೀತಿ, ಸಹೋದರತ್ವ, ಸಮಾನತೆ ಮತ್ತು ಮಾನವೀಯತೆಯಿಂದ ಬದುಕುವುದೇ ನಿಜವಾದ ವಿಶ್ವಮಾನವನ ಲಕ್ಷಣವಾಗಿದೆ. ಹೀಗಾಗಿ "ಅನಿಕೇತನ" ಕವನವು ಮನುಷ್ಯನನ್ನು ಸೀಮಿತ ಬಂಧನಗಳಿಂದ ಮುಕ್ತಗೊಳಿಸಿ, ವಿಶ್ವಬಂಧುತ್ವ ಮತ್ತು ವಿಶ್ವಮಾನವತೆಯ ಕಡೆಗೆ ಕರೆದೊಯ್ಯುವ ಸಂದೇಶವನ್ನು ಸಾರುತ್ತದೆ.

# ಅನಿಕೇತನ

ಓ ನನ್ನ ಚೇತನ, ಆಗು ನೀ ಅನಿಕೇತನ,

ರೂಪರೂಪಗಳನು ದಾಟಿ, ನಾಮಕೋಟಿಗಳನು ಮೀಟಿ,
ಎದೆಯ ಬಿರಿಯೆ ಭಾವ ದೀಟಿ,
ಓ ನನ್ನ ಚೇತನ, ಆಗು ನೀ ಅನಿಕೇತನ

ನೂರು ಮತದ ಹೊಟ್ಟ ತೂರಿ, ಎಲ್ಲ ತತ್ವದೆಲ್ಲೆ ಮೀರಿ,
ನಿರ್ದಿಗಂತವಾಗಿ ಏರಿ,
ಓ ನನ್ನ ಚೇತನ, ಆಗು ನೀ ಅನಿಕೇತನ

ಎಲ್ಲಿಯೂ ನಿಲ್ಲದಿರು, ಮನೆಯನೆಂದೂ ಕಟ್ಟದಿರು,
ಕೊನೆಯನೆಂದು ಮುಟ್ಟದಿರು, ಓ ಅನಂತವಾಗಿರು,
ಓ ನನ್ನ ಚೇತನ, ಆಗು ನೀ ಅನಿಕೇತನ

ಅನಂತ ತಾನ್ ಅನಂತವಾಗಿ, ಆಗುತಿಹನೆ ನಿತ್ಯಯೋಗಿ,
ಅನಂತ ನೀ ಅನಂತವಾಗು, ಆಗು ಆಗು ಆಗು,
ಓ ನನ್ನ ಚೇತನ, ಆಗು ನೀ ಅನಿಕೇತನ